# ಶ್ರೀರಾಮಕೃಷ್ಣ ವಚನವೇದದಿಂದ



## ಪ್ರೇಮಾಭಕ್ತಿ

ಎಲ್ಲಕ್ಕಿಂತಲೂ ಮುಖ್ಯವಾದದ್ದು ಭಗವಂತನನ್ನು ಪ್ರೀತಿಸುವುದು, ಆತನ ಮಾಧುರ್ಯವನ್ನು ಸವಿಯುವುದು. ಆತ ರಸ, ಭಕ್ತ ಆಸ್ವಾದಕ. ಭಕ್ತ ಭಗವದಾನಂದವನ್ನು ಸವಿಯುತ್ತಾನೆ. ದೇವರು ತಾವರೆ ಹೂವು, ಭಕ್ತ ದುಂಬಿ. ಭಕ್ತ ತಾವರೆ ಹೂವಿನ ಮಧುವನ್ನು ಹೀರುತ್ತಾನೆ.

ನಿಷ್ಠಾಭಕ್ತಿ ಯಾವ ರೀತಿಯದು ಗೊತ್ತೆ? ಇದು ಮನೆಯಲ್ಲಿ ಸೊಸೆಯ ವ್ಯವಹಾರದ ಹಾಗೆ. ಆಕೆ ಭಾವ, ಮೈದುನ ಮಾವ, ಗಂಡ ಎಲ್ಲರಿಗೂ ಕಾಲು ತೊಳೆಯುವುದಕ್ಕೆ ನೀರು, ಕೈ ಬಾಯಿ ಒರೆಸಿಕೊಳ್ಳುವುದಕ್ಕೆ ವಸ್ತ್ರ, ಕುಳಿತುಕೊಳ್ಳುವುದಕ್ಕೆ ಮಣೆ, ಹೀಗೆ ಅನೇಕ ರೀತಿಯಲ್ಲಿ ಸೇವೆ ಮಾಡುತ್ತಾಳೆ. ಆದರೆ ತನ್ನ ಪತಿಯೊಡನೆ ಮಾತ್ರ ಬೇರೆ ಸಂಬಂಧ ಇಟ್ಟುಕೊಂಡಿರುತ್ತಾಳೆ.

ಈ ಪ್ರೇಮಾಭಕ್ತಿಯಲ್ಲಿ 'ಅಹಂಕಾರ' 'ಮಮಕಾರ' ಎರಡೂ ಇವೆ. ಯಶೋದೆ ಭಾವಿಸುತ್ತಿದ್ದಳು : "ನಾನು ಗೋಪಾಲನ ಯೋಗಕ್ಷೇಮವನ್ನು ನೋಡಿಕೊಳ್ಳದಿದ್ದರೆ, ಬೇರೆ ಯಾರು ತಾನೆ ನೋಡಿಕೊಳ್ಳುತ್ತಿದ್ದರು? ನಾನು ನೋಡಿಕೊಳ್ಳದಿದ್ದರೆ ಅವನು ಕಾಯಿಲೆ ಬಿದ್ದುಬಿಡುತ್ತಾನೆ." ಶ್ರೀಕೃಷ್ಣ ಸಾಕ್ಷಾತ್ ಭಗವಂತ ಎಂಬ ಬೋಧೆ ಯಶೋದೆಗಿರಲಿಲ್ಲ. ಎರಡನೆಯದು 'ಮಮಕಾರ' ಭಗವಂತ ತನ್ನವನು ಎಂದು ಭಾವಿಸುವುದು, 'ನನ್ನ ಗೋಪಾಲ' ಎಂದು ಭಾವಿಸುವಿಕೆ. ಕೃಷ್ಣ ಹೇಗಿದ್ದಾನೆ ಎಂದು ಒಮ್ಮೆ ಯಶೋದೆ ಉದ್ಧವನನ್ನು ಕೇಳಿದಾಗ ಆತ, "ತಾಯೆ, ನಿನ್ನ ಕೃಷ್ಣ ಸಾಕ್ಷಾತ್ ಭಗವಂತನೇ; ಜಗಚ್ಚಿಂತಾಮಣಿಯೇ. ಆತ ಸಾಮಾನ್ಯ ಮನುಷ್ಯನಲ್ಲ." ಯಶೋದೆ ಹೇಳಿದಳು, "ನೋಡಿಲ್ಲಿ, ನಾನು ಕೇಳಿದ್ದು ನಿಮ್ಮ ಚಿಂತಾಮಣಿಯ ವಿಷಯ ಅಲ್ಲ; ನನ್ನ ಗೋಪಾಲ ಹೇಗಿದ್ದಾನೆ ಎಂಬುದಾಗಿ. ಚಿಂತಾಮಣಿಯನ್ನಲ್ಲ, ನನ್ನ ಗೋಪಾಲನನ್ನು."

ಗೋಪಿಯರದು ಎಂಥಾ ನಿಷ್ಠಾಪ್ರೇಮ! ಅವರು ಮಥುರೆಗೆ ಹೋಗಿ ದ್ವಾರಪಾಲಕನನ್ನು ಬಹಳವಾಗಿ ಬೇಡಿಕೊಂಡು ಸಭಾಮಂದಿರವನ್ನು ಪ್ರವೇಶಮಾಡಿದರು. ದ್ವಾರಪಾಲಕ ಅವರನ್ನು ಶ್ರೀಕೃಷ್ಣನ ಹತ್ತಿರಕ್ಕೆ ಕರೆದುಕೊಂಡು ಹೋದ. ಆದರೆ ಅಲ್ಲಿ ರುಮಾಲು ಸುತ್ತಿರುವ ಶ್ರೀಕೃಷ್ಣನನ್ನು ಕಂಡು, ತಲೆತಗ್ಗಿಸಿ ತಮ್ಮೊಳಗೇ ಮಾತಾಡಿಕೊಳ್ಳಲಾರಂಭಿಸಿದರು: "ತಲೆಗೆ ರುಮಾಲು ಸುತ್ತಿ ಕುಳಿತಿದ್ದಾನಲ್ಲ, ಇವನಾರು? ಈತನೊಡನೆ ಮಾತುಕತೆಯಾಡಿ ಕೊನೆಗೆ ನಾವು ಶ್ರೀಕೃಷ್ಣನಲ್ಲಿಟ್ಟಿರುವ ನಿಷ್ಠಾಭಕ್ತಿಯನ್ನು ಕಳೆದುಕೊಳ್ಳೋಣವೇ? ಪೀತಾಂಬರಧಾರಿಯಾದ, ನವಿಲುಗರಿಯ ಕಿರೀಟ ಧರಿಸಿರುವ ನಮ್ಮ ಪ್ರಾಣವಲ್ಲಭ ಶ್ರೀಕೃಷ್ಣನೆಲ್ಲಿ?"

ನೋಡಿದಿರೋ, ಗೋಪಿಯರ ನಿಷ್ಠೆ ಎಷ್ಟು ಅದ್ಭುತವಾದದ್ದು! ಬೃಂದಾವನದ ಭಾವ ಬಹಳ ವಿಶೇಷವಾದ್ದು. ಕೇಳಿದ್ದೇನೆ, ದ್ವಾರಕೆಯ ಜನರು ಅರ್ಜುನನ ಸಖನಾದ ಶ್ರೀಕೃಷ್ಣನನ್ನು ಮಾತ್ರ ಪೂಜಿಸುತ್ತಾರೆ; ರಾಧೆಯನ್ನು ತಿರಸ್ಕರಿಸುತ್ತಾರೆ ಎಂಬುದಾಗಿ.

ಭಗವಂತನಲ್ಲಿ ಅತ್ಯಂತ ಗಾಢವಾದ ಭಕ್ತಿ ಇಲ್ಲದಿದ್ದರೆ, ಆತ ತನ್ನವನೇ ಎಂಬ ಜ್ಞಾನ ಉಂಟಾಗದವರೆಗೆ ಪ್ರೇಮಭಕ್ತಿ ಉಂಟಾಗುವುದಿಲ್ಲ.

ಒಂದು ಕಥೆ ಕೇಳಿ. ಮೂರು ಜನ ಸ್ನೇಹಿತರು ಒಂದು ಕಾಡಿನಲ್ಲಿ ಹೋಗುತ್ತಿದ್ದರು. ಇದ್ದಕ್ಕಿದ್ದಂತೆ ಒಂದು ಹುಲಿ ಅಡ್ಡವಾಯಿತು. ಒಬ್ಬ ಹೇಳಿದ: "ಗೆಳೆಯರಾ, ನಮ್ಮ ಗತಿ ಮುಗಿಯಿತು." ಎರಡನೆಯವನು ಹೇಳಿದ: "ಹಾಗೇಕೆ ಹೇಳುತ್ತೀಯೆ? ನಮ್ಮ ಗತಿ ಏಕೆ ಮುಗಿದು ಹೋದೀತು? ಬನ್ನಿ ಭಗವಂತನನ್ನು ಪ್ರಾರ್ಥಿಸೋಣ." ಮೂರನೆಯವನು ಹೇಳಿದ: "ಇದಕ್ಕೆಲ್ಲ ಭಗವಂತನಿಗೇಕೆ ಕಷ್ಟ ಕೊಡಬೇಕು? ಬನ್ನಿ ಈ ಮರ ಹತ್ತಿಬಿಡೋಣ."

"ನಮ್ಮ ಗತಿ ಮುಕ್ತಾಯವಾಯಿತು" ಎಂದು ಹೇಳಿದವನಿಗೆ ಗೊತ್ತಿಲ್ಲ ಭಗವಂತ ನಮ್ಮ ರಕ್ಷಕನೆಂದು. "ಭಗವಂತನನ್ನು ಪ್ರಾರ್ಥಿಸೋಣ" ಎಂಬುದಾಗಿ ಹೇಳಿದವ ಜ್ಞಾನಿ, ಜ್ಞಾನಿಗೆ ಗೊತ್ತಿದೆ, ಭಗವಂತ ಸೃಷ್ಟಿ, ಸ್ಥಿತಿ ಮತ್ತು ಪ್ರಳಯ ಮಾಡುತ್ತಾನೆ ಎಂಬುದಾಗಿ. ಆದರೆ ಯಾರು "ಇದಕ್ಕೆಲ್ಲ ಭಗವಂತನಿಗೇಕೆ ಕಷ್ಟ ಕೊಡಬೇಕು, ಬನ್ನಿ ಈ ಮರ ಹತ್ತಿಬಿಡೋಣ" ಎಂಬುದಾಗಿ ಹೇಳಿದನೋ ಆತನ ಹೃದಯದಲ್ಲಿ ಪ್ರೇಮ ಅಂಕುರಿಸಿದೆ, ಪ್ರೀತಿ ಹುಟ್ಟಿದೆ. ಪ್ರೇಮದ ಸ್ವಭಾವವೇ ಅಂಥದು. ಅದು ತನ್ನ ಪ್ರೀತಿಪಾತ್ರನಿಗಿಂತ ತಾನೇ ಬಲಶಾಲಿ ಎಂಬುದಾಗಿ ಭಾವಿಸುವಂತೆ ಮನುಷ್ಯನನ್ನು ಪ್ರೇರಿಸುತ್ತದೆ. ಪ್ರೀತಿಪಾತ್ರನಿಗೆ ಯಾವ ತೊಂದರೆಯೂ ಆಗದ ರೀತಿಯಲ್ಲಿ ನೋಡಿಕೊಳ್ಳುತ್ತಾನೆ. ತನ್ನ ಪ್ರೀತಿಪಾತ್ರನ ಕಾಲಿಗೆ ಒಂದು ಮುಳ್ಳೂ ಚುಚ್ಚಕೂಡದು ಎಂಬುದೇ ಆತನ ಹಗಲಿರುಳ ಚಿಂತನೆ.

ಒಂದು ಪಕ್ಷ ನೀನು ಒಬ್ಬ ದೊಡ್ಡ ಧನಿಕನ ಹತ್ತಿರಕ್ಕೆ ದಿವಸವೂ ಹೋಗುತ್ತಿದ್ದೀಯೆ, ಆದರೆ ಅವನಿಂದ ಮಾತ್ರ ಏನನ್ನೂ ಅಪೇಕ್ಷಿಸುತ್ತಿಲ್ಲ, ಸುಮ್ಮನೆ ಆತನ ದರ್ಶನ ಪಡೆಯಲು ಮಾತ್ರ ಹೋಗುತ್ತಿದ್ದೀಯೆ ಅಂತ ಇಟ್ಟುಕೊ. ಆತನೇನಾದರೂ ನಿನಗೆ ಉಪಕಾರ ಮಾಡಲು ಮುಂದೆ ಬಂದರೆ ನೀನು ಹೇಳುತ್ತೀಯೆ: "ದಯವಿಟ್ಟು ಕಷ್ಟ ತೆಗೆದುಕೊಳ್ಳಬೇಡಿ. ನನಗೇನೂ ಬೇಕಾಗಿಲ್ಲ. ತಮ್ಮ ದರ್ಶನ ಪಡೆಯಲು ಮಾತ್ರ ಬಂದಿದ್ದೇನೆ." ಇದಕ್ಕೇ ನಿಜವಾದ ಪ್ರೇಮಭಕ್ತಿ ಅಂತ ಹೆಸರು. ನಿನಗೆ ಭಗವಂತನಿಂದ ಏನೂ ಬೇಕಾಗಿಲ್ಲ. ಸುಮ್ಮನೆ ನೀನು ಆತನನ್ನು ಪ್ರೀತಿಸುತ್ತೀಯೆ.

ಭಗವಂತನ ಮೇಲೆ ಪ್ರೇಮ ಉಂಟಾಯಿತು ಎಂದರೆ, ಹೆಂಡತಿ, ಮಕ್ಕಳು, ಸ್ವಬಾಂಧವರು ಇವರ ಮೇಲೆ ಮನುಷ್ಯನಿಗಿರುವ ಮಾಯಾಪ್ರೇರಿತ ಆಕರ್ಷಣೆ ಇರದು. ಅವರ ಕಡೆಗೆ ಆತನಲ್ಲಿ ದಯೆ ಮಾತ್ರ ಉಳಿದಿರುತ್ತದೆ. ಈ ಜಗತ್ತು ವಿದೇಶವಾಗಿ ತೋರಿ ಬರುತ್ತದೆ, ಕೇವಲ ಕರ್ಮಭೂಮಿಯಾಗಿ ಕಂಡು ಬರುತ್ತದೆ. ಇದು ಹಳ್ಳಿಯಲ್ಲಿ ಸ್ವಂತ ಮನೆ ಇದ್ದು ಕಲ್ಕತ್ತಕ್ಕೆ ಕೆಲಸಕ್ಕೆ ಬರುವ ಹಾಗೆ. ಬಂದವರು ಕೆಲಸದ ಸಲುವಾಗಿ ಬಾಡಿಗೆ ಮನೆ ಮಾಡಿಕೊಳ್ಳಬೇಕಾಗುತ್ತದೆ. ಭಗವಂತನಲ್ಲಿ ಪ್ರೇಮ ಉಂಟಾಯಿತು ಎಂದರೆ, ಸಂಸಾರಾಸಕ್ತಿ, ವಿಷಯಬುದ್ಧಿ, ಒಮ್ಮೆಗೆ ತೊಲಗಿ ಹೋಗುತ್ತವೆ.